SL NO: 22 D: 11-03-26

**ನಗರಾಭಿವೃದ್ಧಿ ಇಲಾಖೆ**

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ಸೂಚನೆ:-**

"ಇ-ಖಾತಾಕ್ಕೆ ಪರದಾಟ, ಸರ್ವರ್ ಡೌನ್ ನೆಪ, ಕೈಗಾರಿಕಾ ಆಸ್ತಿ ನೋಂದಣಿಗೆ ತೊಡಕು" ಎಂಬ ಶೀರ್ಷಿಕೆಯಡಿ ದಿನಾಂಕ:26/02/2026ರ ವಿಜಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳ ನೋಂದಣಿ ಹಾಗೂ ಮಾಲೀಕತ್ವ ವರ್ಗಾವಣೆಗೆ 'ಇ-ಖಾತಾ' ಕಡ್ಡಾಯಗೊಳಿಸಿರುವುದು ಇದೀಗ ಸಾರ್ವಜನಿಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ತಾಂತ್ರಿಕ ದೋಷಗಳು ಮತ್ತು ಪಾಲಿಕೆಯ ಆಡಳಿತಾತ್ಮಕ ವೈಫಲ್ಯದಿಂದಾಗಿ ನೈಜ ಅರ್ಜಿದಾರರು ಅಲೆದಾಡುವಂತಾಗಿದ್ದರೆ, ಮಧ್ಯವರ್ತಿಗಳ ಮೂಲಕ ಅರ್ಜಿ ಸಲ್ಲಿಸಿದರೆ ಕೆಲವೇ ದಿನಗಳಲ್ಲಿ ಕೆಲಸವಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬರುತ್ತಿದೆ.

ಭೂ ಪರಿವರ್ತನೆಯಾದ ಕೃಷಿಯೇತರ ಭೂಮಿ ಮತ್ತು ಸ್ಥಿರಾಸ್ತಿಗಳ ಮಾಲೀಕತ್ವಕ್ಕೆ ಇ-ಖಾತಾ ಕಡ್ಡಾಯವಾಗಿದೆ. ಇ-ಆಸ್ತಿ ತಂತ್ರಾಂಶದ ಮೂಲಕ ಫಾರಂ ನಂಬರ್-3 ಅನ್ನು ನೋಂದಣಿ ಇಲಾಖೆ ಹಾಗೂ ಹಣಕಾಸು ವ್ಯವಹಾರಗಳಿಗೆ ಹಾಜರುಪಡಿಸಬೇಕಿದೆ. ಆದರೆ ಪಾಲಿಕೆಯಲ್ಲಿ ಹಳೆಯ ದಾಖಲೆಗಳ ಲಭ್ಯತೆ ಇಲ್ಲದಿರುವುದು, ಸರ್ವರ್ ಸಮಸ್ಯೆ ಮತ್ತು ತಾಂತ್ರಿಕ ದೋಷಗಳಿಂದಾಗಿ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಪಾಲಿಕೆಗೆ ನೇರವಾಗಿ ಅರ್ಜಿ ಸಲ್ಲಿಸುವ ಸಾರ್ವಜನಿಕರಿಗೆ ಸಿಬ್ಬಂದಿ ನೀಡುವ ಮೊದಲ ಉತ್ತರ 'ಸರ್ವರ್ ಡೌನ್', ಸಿಬ್ಬಂದಿ ಕೊರತೆ, ಹಳೆಯ ಕಂಪ್ಯೂಟರ್, ಸ್ಕ್ಯಾನರ್ ಹಾಗೂ ಪ್ರಿಂಟರ್‌ಗಳ ಅಸಮರ್ಪಕ ಕಾರ್ಯನಿರ್ವಹಣೆಯಿಂದಾಗಿ ಇ-ಖಾತಾ ಸಿಗಲು ತಿಂಗಳುಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ.

ಇತ್ತ, ಸಾರ್ವಜನಿಕರಿಗೆ ತಿಂಗಳುಗಟ್ಟಲೆ ಅಲೆದಾಡುವಂತೆ ಮಾಡುವ ಪಾಲಿಕೆಯಲ್ಲಿ, ಮಧ್ಯವರ್ತಿಗಳು (ಬ್ರೋಕರ್) ಪ್ರವೇಶಿಸುತ್ತಿದ್ದಂತೆಯೇ ಕೆಲಸಗಳು ಸರಾಗವಾಗಿ ನಡೆಯುತ್ತಿವೆ. ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳಿಗೆ ಕೇವಲ 1-2 ದಿನಗಳಲ್ಲಿ ಇ-ಖಾತಾ ಲಭ್ಯವಾಗುತ್ತಿರುವುದು ವ್ಯವಸ್ಥೆಯಲ್ಲಿನ ಭ್ರಷ್ಟಾಚಾರಕ್ಕೆ ಹಿಡಿದ ಕನ್ನಡಿಯಾಗಿದೆ.

ದೂರು ನೀಡಿದವರಿಗೆ 'ತಪ್ಪು ಮಾಹಿತಿ'ಯ ಶಿಕ್ಷೆ!: ಸಿಸ್ಟಂನಲ್ಲಿನ ವಿಳಂಬ ಹಾಗೂ ಮಧ್ಯವರ್ತಿಗಳ ಹಾವಳಿ ಬಗ್ಗೆ ಮೇಲಾಧಿಕಾರಿಗಳಿಗೆ ದೂರು ನೀಡುವ ಸಾಹಸ ಮಾಡಿದರೆ, ಅರ್ಜಿದಾರರಿಗೆ ಪರೋಕ್ಷವಾಗಿ ಶಿಕ್ಷೆ ನೀಡಲಾಗುತ್ತಿದೆ. ಅಂತಹವರ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ 'ರಾಂಗ್ ಎಂಟ್ರಿ' ಮಾಡಲಾಗುತ್ತಿದೆ.

ಇ-ಖಾತಾ ಕಡ್ಡಾಯದ ಬಿಸಿ ಕರಾವಳಿಯ ಆರ್ಥಿಕ ಬೆನ್ನೆಲುಬಾದ ಕೈಗಾರಿಕಾ ವಲಯಕ್ಕೂ ತಟ್ಟಿದೆ. ಕರಾವಳಿಯ ಅತೀ ದೊಡ್ಡ ಕೈಗಾರಿಕಾ ವಸಾಹತು ಎಂಬ ಹೆಗ್ಗಳಿಕೆ ಬೈಕಂಪಾಡಿ ಇಂಡಸ್ಟ್ರಿಯಲ್ ಪ್ರದೇಶದ್ದು. 650ಕ್ಕೂ ಅಧಿಕ ಕೈಗಾರಿಕೆಗಳು ಬೈಕಂಪಾಡಿ ವ್ಯಾಪ್ತಿಯಲ್ಲಿವೆ. ಸುಮಾರು 15 ಸಾವಿರ ಮಂದಿ ಈ ಕೈಗಾರಿಕೆಯನ್ನೇ ಅವಲಂಬಿಸಿದ್ದಾರೆ. ಸುಮಾರು 17.58 ಎಕರೆ ಪ್ರದೇಶದಲ್ಲಿ ಸ್ಥಾಪನೆಯಾದ ಎಸ್ಟೇಟ್‌ನಲ್ಲಿ ಸುಮಾರು 90 ಉದ್ದಿಮೆಗಳಿವೆ. 2,500ಕ್ಕೂ ಅಧಿಕ ಕಾರ್ಮಿಕರು ಇದ್ದಾರೆ. ಕೊಲ್ನಾಡು, ಮುಡಿಪು, ಪುತ್ತೂರು ಸಹಿತ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆ ಕೈಗಾರಿಕಾ ವಲಯವಿದ್ದು, ಇವರೆಲ್ಲರಿಗೂ ಇ-ಖಾತೆ ಹೊಸ ಸಮಸ್ಯೆಯಾಗಿದೆ.

ಜನಸಾಮಾನ್ಯರ ಹಿತದೃಷ್ಟಿಯಿಂದ ಮದ್ಯವರ್ತಿಗಳ ಮೇಲೆ ನಿಗಾವಹಿಸಲು ಪಾಲಿಕೆಯ ಎಲ್ಲಾ ವಿಭಾಗಗಳಿಗೂ ಕೂಡಲೇ ಸಿಸಿಟಿವಿ ಅಳವಡಿಸಿ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ, ಇ-ಖಾತಾ ಸರ್ವರ‌ನ್ನು ಮೇಲ್ದರ್ಜೆಗೇರಿಸಿ, ಸೂಕ್ತ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಮಸ್ಯೆಗೆ

ಶಾಶ್ವತ ಪರಿಹಾರ ಒದಗಿಸಬೇಕಾಗಿ ಈ ಮೂಲಕ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

*****

**ಉತ್ತರ:-**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾತಾ ಸೃಜನೆ ಮತ್ತು ಹಕ್ಕುವರ್ಗಾವಣೆ ಪ್ರಕ್ರಿಯೆಗೆ ಇ-ಆಸ್ತಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದ್ದು, ಸದರಿ ತಂತ್ರಾಂಶವನ್ನು Karnataka State Data Centre (KSDC) ನಲ್ಲಿ host ಮಾಡಲಾಗಿರುತ್ತದೆ. ಸದರಿ ಡೇಟಾ ಸೆಂಟರ್ ನ್ನು ನವೆಂಬರ್-2025 ರೂ.3.12 ಕೋಟಿ ವೆಚ್ಚದಲ್ಲಿ ಉನ್ನತೀಕರಣಗೊಳಿಸಿ, ಹಳೆ ಸರ್ವರ್ ನಿಂದ ಉನ್ನತೀಕರಣಗೊಂಡ ಸರ್ವರ್‌ಗೆ ವರ್ಗಾಯಿಸುವ ಪ್ರಕ್ರಿಯೆ ಸಮಯದಲ್ಲಿ ಹಾಗೂ ಡಿಸೆಂಬರ್-2025 ತಿಂಗಳಲ್ಲಿ ಬಿ.ಬಿ.ಎಂ.ಪಿ ಮಾದರಿಯಲ್ಲಿ Draft e-Khata ಅನುಷ್ಠಾನ ಸಂದರ್ಭದಲ್ಲಿ ತಂತ್ರಾಂಶದ ತೊಡಕು ನಿವಾರಿಸುವ ಸಮಯದಲ್ಲಿ ತಾಂತ್ರಿಕ ಸಮಸ್ಯೆಯಿಂದ ಕಾರ್ಯನಿರ್ವಹಣೆಯಲ್ಲಿ ತೊಡಕುಂಟಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ UPOR Data ಬಳಸಿ ಮೊಬೈಲ್ ಆಪ್ ಮುಖಾಂತರ Street Data ದೊಂದಿಗೆ ವಿಶಿಷ್ಟ feature ನೊಂದಿಗೆ ಇ-ಆಸ್ತಿ ಮುಖಾಂತರ ಇ-ಖಾತಾಗಳನ್ನು ನೀಡುವ ವ್ಯವಸ್ಥೆಯು ಜಾರಿಯಲ್ಲಿತ್ತು. ಡಿಸೆಂಬರ್ ತಿಂಗಳಲ್ಲಿ Draft e-Khata ಅನುಷ್ಠಾನ ಸಂದರ್ಭದಲ್ಲಿ ಸದರಿ ವಿಶಿಷ್ಟ feature ನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕರೂಪತೆ ತರಲು disable ಮಾಡಲಾಗಿದ್ದು, ಮಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಕೋರಿಕೆಯಂತೆ ಸದರಿ ವಿಶಿಷ್ಟ feature ನ್ನು ಮರು ಸ್ಥಾಪಿಸಲು ಕ್ರಮವಹಿಸಲಾಗಿದೆ.

ತಂತ್ರಾಂಶಕ್ಕೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಿಂದ ಎದುರಾಗುವ ತಾಂತ್ರಿಕ ಸಮಸ್ಯೆ/Bugs/Issues ಗಳನ್ನು ಆದ್ಯತೆ ಮೇರೆಗೆ ಹಂತ ಹಂತವಾಗಿ ಎನ್.ಐ.ಸಿ ಯಿಂದ ಪರಿಹರಿಸಲಾಗುತ್ತಿದೆ.

ಮಂಗಳೂರು ಮಹಾನಗರ ಪಾಲಿಕೆಯ ಕಂದಾಯ ಶಾಖೆಯಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ, ಹೊಸ ಕಂಪ್ಯೂಟರ್ ಸ್ಕ್ಯಾನರ್ ಹಾಗೂ ಪ್ರಿಂಟರ್ ಗಳನ್ನು ಅಳವಡಿಸಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇ-ಖಾತಾ ಕೋರಿ ಅರ್ಜಿ ಸಲ್ಲಿಸಿದ 07 ದಿನಗಳ ಒಳಗಾಗಿ ಖಾತಾ ನೀಡಲಾಗುತ್ತಿದೆ. ಇ-ಆಸ್ತಿ ತಂತ್ರಾಂಶದಲ್ಲಿ ತಾಂತ್ರಿಕ ಸಮಸ್ಯೆಗಳು ಉಂಟಾದಾಗ ಆದ್ಯತೆ ಮೇರೆಗೆ ಪರಿಹರಿಸಲಾಗುತ್ತಿದ್ದು, ಪ್ರಸ್ತುತ ಸ್ವತ್ತಿನ ಖಾತಾದಾರರು ಸಿಟಿಜನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ ಖಾತಾ ಪಡೆಯಲು ಅವಕಾಶವಿರುತ್ತದೆ.

**ನಅಇ 23 ಎಂಎಂಸಿ 2026(ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು